**<u>2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ</u>**

**<u>ಸತ್ರ ಮೊಕದ್ದಮೆ ಸಂಖ್ಯೆ:16/2026</u>**

ಪಿ.ಡಬ್ಲು: **6** ಸಿಡಬ್ಲು: **7**

| | | |
|---|---|---|
| ಸಾಕ್ಷಿಯ ಹೆಸರು | : | ಹಾವೇಶ್ ಅಲಿ ಶೇಕ್ |
| ಗಂಡನ ಹೆಸರು | : | ಅಲ್ಲಾಬಕ್ಷಿ ಶೇಕ್ |
| ವಯಸ್ಸು | : | 47 ವರ್ಷ |
| ವೃತ್ತಿ | : | ಕಾರ್ಪೆಂಟರ್ |
| ವಾಸಸ್ಥಳ | : | ಕಲ್ಯಾಣ, ಠಾಣೆ ಜಿಲ್ಲೆ ಮಹಾರಾಷ್ಟ್ರ |

**<u>ಸತ್ಯಪ್ರತಿಜ್ಞೆ ಮಾಡಿದ ದಿನಾಂಕ: 12.08.2026</u>**

<u>ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:-</u>

**1)** ಚಾಸಾ-**8** ನನ್ನ ಹೆಂಡತಿ. ಚಾಸಾ-**1** ನನ್ನ ಹೆಂಡತಿಯ ತಂಗಿ. ಚಾಸಾ-**5** ನನ್ನ ಅತ್ತೆ. ಆರೋಪಿ ಚಾಸಾ-**1** ರವರ ಗಂಡ. ಆರೋಪಿ ಹೊಸಪೇಟೆಯಲ್ಲಿ ವಾಸವಿದ್ದ. ಆತ ಎಲ್ಕ್ಟಿಕ್ ಕೆಲಸ ಮಾಡುತ್ತಿದ್ದ. ಸುಮಾರು 8 ವರ್ಷದ ಹಿಂದೆ ಚಾಸಾ-**1** ರವರ ಮದುವೆ ಆರೋಪಿಯ ಜೊತೆ ಆಗಿತ್ತು. ಅವರಿಗೆ ಒಂದು ಗಂಡು ಮಗು ಇದೆ.

**2)** ಆರೋಪಿ ಮತ್ತು ಚಾಸಾ-**1** ಅನ್ಯೋನ್ಯವಾಗಿ ಇದ್ದಾರೆ. ಆರೋಪಿಯು ಚಾಸಾ-**1** ರವರಿಗೆ ಹೊಡೆದು ಬೈದು ಮಾನಸಿಕ ಹಾಗು ದೈಹಿಕ ಹಿಂಸೆ ನೀಡಿಲ್ಲ. ಚಾಸಾ-**1** ಸಹ ನನಗೆ ಆರೋಪಿ ಅವಳಿಗೆ ಹಿಂಸೆ ನೀಡಿದ ಬಗ್ಗೆ ತಿಳಿಸಿಲ್ಲ. ನಾನು ಆರೋಪಿಗೆ ಯಾವತ್ತೂ ಬುದ್ದಿವಾದ ಹೇಳಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಬೇರೆ ಹೆಚ್ಚಿನ ಮಾಹಿತಿ ಇಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ಆರೋಪಿಯು ನನಗೆ ಬೆದರಿಕೆ ಹಾಕಿಲ್ಲ. ನಾನು ಈ ಪ್ರಕರಣದಲ್ಲಿ ಯಾವುದೇ ಪಂಚಾಯತಿಯನ್ನು ಮಾಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಅವರ ವಾದವನ್ನು

ಕೇಳಿ, ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರಿಗೆ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).

<u>ಪಾಟೀಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:</u>

**3)** ಆರೋಪಿಯ ಮದುವೆ ಚಾಸಾ-**1** ರವರ ಜೊತೆ ಆಗಿದ್ದ ಸಮಯದಲ್ಲಿ ವರದಕ್ಷಿಣೆಯಾಗಿ ರೂ.**2,10,000/-** ಹಣವನ್ನು ಹಾಗು ರೂ.**1,50,000/-**ದ ಮನೆ ಸಾಮಾನುಗಳನ್ನು ವರದಕ್ಷಿಣೆಯಾಗಿ ಆರೋಪಿಗೆ ನೀಡಲಾಗಿತ್ತು ಎಂದರೆ ಸರಿಯಲ್ಲ. ಆರೋಪಿಯು ಚಾಸಾ-**1** ರವನ್ನು ಮದುವೆಯಾದ ನಂತರ ಅವಳ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಾ ಹೆಚ್ಚಿನ ವರದಕ್ಷಿಣೆ ಹಣ ತರುವಂತೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುತ್ತಿದ್ದ ಎಂದರೆ ಸರಿಯಲ್ಲ. ಆರೋಪಿಯು ಚಾಸಾ-**1** ರವರನ್ನು ಕೊಲೆ ಮಾಡಲು ಪ್ರಯತ್ನಿಸಿ ಅವಳ ಕುತ್ತಿಗೆ ಹಿಸುಕಿದ್ದ ಎಂದರೆ ಸರಿಯಲ್ಲ. ಚಾಸಾ-**1** ತಪ್ಪಿಸಿಕೊಂಡಿದ್ದಳು ಎಂದರೆ ಸರಿಯಲ್ಲ. ನಾನು ಸದರಿ ವಿಷಯದ ಬಗ್ಗೆ ತಿಳಿದುಕೊಂಡು ಆರೋಪಿಗೆ ಬುದ್ದಿವಾದ ಹೇಳಿದ್ದೆ ಎಂದರೆ ಸರಿಯಲ್ಲ.

**4)** ದಿನಾಂಕ **09.09.2017** ರಂದು ಚಾಸಾ-**1** ರವರನ್ನು ಆರೋಪಿಯು ಚಾಸಾ-**5** ರವರ ಮನೆಯಲ್ಲಿ ಬಿಟ್ಟು ಚಾಸಾ-**5** ರವರಿಂದ ರೂ.**50,000/-** ಹಣವನ್ನು ತನ್ನ ವರ್ಗಾವಣೆಗಾಗಿ ಪಡೆದುಕೊಂಡಿದ್ದ ಎಂದರೆ ಸರಿಯಲ್ಲ. ಈ ವಿಚಾರವಾಗಿ ಪಂಚಾಯತಿ ಆಗಿತ್ತು ಎಂದರೆ ಸರಿಯಲ್ಲ. ಆ ದಿವಸ ಆರೋಪಿಯು ಚಾಸಾ-**1, 5, 8, 9** ಮತ್ತು ನನಗೆ ಹೆದರಿಸಿದ್ದ ಎಂದರೆ ಸರಿಯಲ್ಲ. ದಿನಾಂಕ **16.02.2020** ರಂದು ಆರೋಪಿಯು ಚಾಸಾ-**1** ಮತ್ತು **5** ರವರ ಮನೆಯ ಸುತ್ತಮುತ್ತ ಕಬ್ಬಿಣದ ರಾಡನ್ನು ಹಿಡಿದುಕೊಂಡು ಓಡಾಡಿದ್ದ ಎಂದರೆ ಸರಿಯಲ್ಲ. ಈ ಎಲ್ಲಾ ಸಂಗತಿಗಳ ಬಗ್ಗೆ ನಾನು ಚಾಸಾ-**1** ರವರಿಂದ ಕೇಳಿ ತಿಳಿದುಕೊಂಡಿದ್ದೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಿನಾಂಕ **20.05.2020** ರಂದು ಪೋಲಿಸರ ಮುಂದೆ ನನಗೆ ಈಗ ಓದಿ ಹೇಳಿದಂತೆ "ನಾನು ಮೇಲ್ಕಂಡ ವಿಳಾಸದಲ್ಲಿ

------- ದೂರು ನೀಡಿರುವ ವಿಷಯ ತಿಳಿದಿರುತ್ತದೆ" ಎಂದು ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯ ಭಾಗವನ್ನು ನಿಪಿ-8 ಎಂದು ಗುರುತಿಸಲಾಯಿತು. ನಾನು ಪೊಲೀಸರ ಮುಂದೆ ನಿಪಿ-8 ರಂತೆ ಹೇಳಿಕೆಯನ್ನು ಕೊಟ್ಟಿದ್ದರುಾ ಸಹ ಮತ್ತು ನನಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲು ಆರೋಪಿ ಪರವಾಗಿ ಶ್ರೀ ಕೆ.ವಿ.ಕೆ ವಕೀಲರಿಂದಃ</u>

ಶ್ರೀ ಕೆ.ವಿ.ಕೆ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.